**PW-2:** ಅನಸೂಯಮ್ಮ

ದಿನಾಂಕಃ **18.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ ಪಿ.ವಿ.ವೈ. ವಕೀಲರಿಂದಃ</u>

1. ನನ್ನ ತಂದೆಯ ಹೆಸರು ಟಿ.ಹೆಚ್. ನಂಜುಡಚಾರ್. ಅವರ ತಂದೆಯ ಹೆಸರು ಹನುಮಂತರಾಯಪ್ಪ. ನಮ್ಮ ತಂದೆ ಹನುಮಂತರಾಯಪ್ಪ ರವರ ದೊಡ್ಡ ಹೆಂಡತಿಯ ಮಗ. ನಮ್ಮ ತಂದೆಯ ತಾಯಿಯ ಹೆಸರು ಗೊತ್ತಿಲ್ಲ. ದಾವಾ ಸ್ವತ್ತಗಳನ್ನು ದಿನಾಂಕಃ 23.04.1962 ರಲ್ಲಿ ಹನುಮಂತರಾಯಪ್ಪ ರವರ ಪತ್ನಿ ಲಕ್ಷ್ಮಮ್ಮ ರವರ ಸ್ವಯಾರ್ಜಿತವಾಗಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಮಕ್ಕಳೆಲ್ಲಾ ಖರೀದಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಮಕ್ಕಳೆಲ್ಲರೂ ಖರೀದಿಸಿದ ಬಗ್ಗೆ ಖರೀದಿ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂಬ ಬಗ್ಗೆ ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ಲಕ್ಷ್ಮಮ್ಮ ರವರು ಸ್ವಂತ ದುಡಿಮೆಯಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಊರಿನಲ್ಲಿ ಷಣ್ಮುಖಚಾರಿ ಮಾತ್ರ ಒಬ್ಬರೇ ವಾಸವಿದ್ದು ಉಳಿದವರು ಬೇರೆ ಕಡೆ ಕೆಲಸದ ನಿಮಿತ್ತ ವಾಸವಾಗಿದ್ದರು ಎಂದರೆ ಸರಿ. ಷಣ್ಮುಖಚಾರಿ ಮತ್ತು ಅವರ ಪತ್ನಿ ಕಮಲಮ್ಮ ರವರು ಲಕ್ಷ್ಮಮ್ಮ ರವರನ್ನು ಜೀವಿತಕಾಲದಲ್ಲಿ ಪಾಲನೆ ಪೋಷಣೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಹೋಗಿ ಬರುತ್ತಿದ್ದರು ಎಂದು ಉತ್ತರಿಸುತ್ತಾರೆ. ಲಕ್ಷ್ಮಮ್ಮ ರವರು ಷಣ್ಮುಖಚಾರಿ ರವರ ಮನೆಯಲ್ಲಿ ಹೆಚ್ಚು ವಾಸವಿದ್ದರು ಎಂದರೆ ಸರಿ. ಲಕ್ಷ್ಮಮ್ಮ ರವರು ಜೀವಂತ ಇದ್ದಾಗಲೇ ಷಣ್ಮುಖಚಾರಿ ಮೃತಪಟ್ಟರು ಎಂದರೆ ಸರಿ.

2. ಷಣ್ಮುಖಚಾರಿ ರವರು ಮೃತಪಟ್ಟ ನಂತರ ಲಕ್ಷ್ಮಮ್ಮ ರವರನ್ನು 1 ನೇ ಪ್ರತಿವಾದಿ ಕಮಲಮ್ಮ ರವರೇ ಪಾಲನೆ ಪೋಷಣೆ ಮಾಡುತ್ತಿದ್ದರು ಎಂದರೆ ಸರಿ. ಅವರು ಬಂದು ಹೋಗುತ್ತಿದ್ದರು ಎಂದು ಉತ್ತರಿಸುತ್ತಾರೆ. ಕಮಲಮ್ಮ ರವರೇ ಲಕ್ಮಮ್ಮ ರವರನ್ನು ಪಾಲನೆ

ಪೋಷಣೆ ಮಾಡುತ್ತಿದ್ದ ಕಾರಣ ಅವರ ಮೇಲಿನ ಪ್ರೀತಿ ವಾತ್ಸಲ್ಯದಿಂದ ದಿನಾಂಕಃ 14.03.1989 ರಂದು ಕಮಲಮ್ಮ ರವರ ಹೆಸರಿಗೆ ನೋಂದಾಯಿತ ಉಯಿಲನ್ನು ಬರೆದಿರುತ್ತಾರೆ ಎಂದರೆ ಸರಿ. ಒಳಗೊಳಗೆ ಮಾಡಿದ್ದು ನನಗೆ ಗೊತ್ತಿದ್ದು ಎಂದು ಉತ್ತರಿಸುತ್ತಾರೆ. ಲಕ್ಷ್ಮಮ್ಮ ರವರು ಮೃತಪಟ್ಟ ನಂತರ ಸ್ವತ್ತುಗಳು ಕಮಲಮ್ಮ ರವರ ಉಯಿಲಿನಂತೆ ಎಂ.ಆರ್. 1/1994-95 ರಂತೆ ಖಾತೆಯಾಗಿರುತ್ತದೆ ಎಂಬುದು ಗೊತ್ತಿಲ್ಲ. ನನ್ನ ಚಿಕ್ಕಪ್ಪ ಆನಂದಚಾರಿ ಯಾವಾಗ ಮೃತಪಟ್ಟಿರುತ್ತಾರೆ ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ರವರು ಜೀವಂತ ಇದ್ದಾಗ ಮತ್ತು ಅವರು ಮೃತಪಟ್ಟ ನಂತರ ಸ್ವತ್ತುಗಳ ಖಾತೆ 1ನೇ ಪ್ರತಿವಾದಿ ಹೆಸರಿಗೆ ಆಗಿರುವ ಖಾತೆಯನ್ನು ಪ್ರಶ್ನೆ ಮಾಡಿಲ್ಲ ಎಂಬುದು ನನಗೆ ಗೊತ್ತಿಲ್ಲ. ನಂತರ ಕಮಲಮ್ಮ ಮತ್ತು ತಮ್ಮ ಮಕ್ಕಳು ಪ್ರತಿವಾದಿ 2 ರಿಂದ 6 ರವರ ಜೊತೆ ದಿನಾಂಕಃ 09.03.2001 ರಲ್ಲಿ ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ವಿಭಾಗಪತ್ರದಂತೆ 2ನೇ ಪ್ರತಿವಾದಿಗೆ ಸ.ನಂ. 118/2 ರಲ್ಲಿ 5 ಎಕರೆ ಆಸ್ತಿಯನ್ನು, ಸಿ ಷೆಡ್ಯೂಲ್ ದಾರ 6ನೇ ಪ್ರತಿವಾದಿ ಹನಮಂತರಾಯಪ್ಪ ರವರಿಗೆ 5 ಎಕರೆ ಸ್ವತ್ತು ಮತ್ತು ಕಮಲಮ್ಮ ರವರು 6 ಎಕರೆ 8 ಗುಂಟೆ ಉಳಿಸಿಕೊಂಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

3. ಪ್ರತಿವಾದಿ 2 ರವರು ದಿನಾಂಕಃ 12.02.2014 ರಂದು ತಮ್ಮ ಪತ್ನಿಯ ಹೆಸರಿಗೆ 3 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂಬುದು ಗೊತ್ತಿಲ್ಲ. ಅದರಂತೆ ಕಮಲಮ್ಮ ಮತ್ತು ಅವರ ಮಕ್ಕಳು ಹೆಸರಿಗೆ ಖಾತೆ ಪಹಣಿಯಾಗಿದ್ದು ಅವರು ಸ್ವತ್ತಿನ ಮಾಲೀಕರು ಮತ್ತು ಸ್ವಾಧೀನದಲ್ಲಿರುತ್ತಾರೆ ಎಂಬುದಕ್ಕೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿಯಲ್ಲ ಮತ್ತು ಲಕ್ಷ್ಮಮ್ಮ ರವರ ಸ್ವಯಾರ್ಜಿತ ಸ್ವತ್ತು ಅದನ್ನು ಕಮಲಮ್ಮ ರವರಿಗೆ ಉಯಿಲು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಉಯಿಲಿನಂತೆ ಕಮಲಮ್ಮ ರವರಿಗೆ ಸ್ವತ್ತು ಸ್ವಯಾರ್ಜಿತವಾಗಿ ಬಂದಿದ್ದು ಅವರೇ ಸ್ವತ್ತಿನ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಕಮಲಮ್ಮ ಮತ್ತು ಅವರ ಮಕ್ಕಳನ್ನು ಹೊರತುಪಡಿಸಿ ಬೇರೆ ಯಾರಿಗೂ

ಸ್ವತ್ತಿನಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳ ಬಗ್ಗೆ ಯಾವುದೇ ಮಾಹಿತಿ ತಿಳಿಯದೇ ಇದ್ದರೂ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.